# ವಿಕಾಸದ ಕಥೆ

ಸ್ವಾಮಿ ಸುನಿರ್ಮಲಾನಂದ

## ತುಂಟರಿಗಿದು ಗೊತ್ತು

**ನಡೆದ ಘಟನೆ!** ವಿದೇಶದಲ್ಲಿ ನಡೆದದ್ದು, ನೂರು ವರ್ಷಗಳ ಹಿಂದೆ. ಅದೊಂದು ಪುಟ್ಟ ಊಟದ ಟೇಬಲ್—ಎದುರು ಬದುರಾಗಿ ಎರಡು ಕುರ್ಚಿ ಇವೆ. ಟೇಬಲಿನ ಒಂದು ಕಡೆ ಒಬ್ಬ ವಿದೇಶೀ ವ್ಯಕ್ತಿ ಕುಳಿತಿದ್ದಾನೆ. ಅವನೆದುರಿಗೆ ವಿವೇಕಾನಂದರು ಕುಳಿತಿದ್ದಾರೆ. ಇಬ್ಬರೂ ಊಟ ಮಾಡುತ್ತಿದ್ದಾರೆ. ಹಠಾತ್ತಾಗಿ ಆ ವಿದೇಶೀ ವ್ಯಕ್ತಿಗೆ ಸ್ವಾಮೀಜಿಯವರನ್ನು ಕೀಟಲೆ ಮಾಡುವ ಆಸೆಯಾಯಿತು. ಸಾಧಾರಣವಾಗಿ ಎಲ್ಲರಿಗೂ, ವಿಶೇಷವಾಗಿ ವಿದ್ಯಾರ್ಥಿಗಳಿಗೆ, ಕೀಟಲೆ ಮಾಡುವುದು ಎಂದರೇನೆಂದು ಚೆನ್ನಾಗಿ ಗೊತ್ತು. ಯಾರು ಕೀಟಲೆಗೆ ಪಾತ್ರರಾಗುತ್ತಾರೋ ಅವರಲ್ಲಿ ಏನಾದರೂ ವೈಚಿತ್ರ್ಯ– ಬಟ್ಟೆಯಲ್ಲಿ, ಶರೀರದಲ್ಲಿ, ಮಾತಿನಲ್ಲಿ, ಹಾವಭಾವದಲ್ಲಿ– ಕಂಡರೆ ಮುಗಿದೇ ಹೋಯಿತು.

> ಮಂಗನು ವಿಕಾಸ ಹೊಂದಿ ಮನುಷ್ಯನಾದಂತೆ, ಮಂಗನಂತೆ ಚಂಚಲವಾದ ಮನಸ್ಸು ವಿಕಾಸ ಹೊಂದಿ ದೇವರ ಮನಸ್ಸಾಗುತ್ತದೆ ಎನ್ನುತ್ತಾರೆ ಸ್ವಾಮಿ ಸುನಿರ್ಮಲಾನಂದರು. ಇವರು ರಾಮಕೃಷ್ಣ ಮಹಾಸಂಘದ ಅಂಗಪತ್ರಿಕೆಯಾದ 'ಪ್ರಬುದ್ಧ ಭಾರತ'ದ ಸಂಪಾದಕರಾಗಿರುವರು.

ಆ ವಿದೇಶೀ ವ್ಯಕ್ತಿ ಊಟಮಾಡುವುದನ್ನು ಕ್ಷಣಕಾಲ ನಿಲ್ಲಿಸಿ ಸ್ವಾಮೀಜಿಯವರನ್ನು ಕೇಳಿದ: **'ಸ್ವಾಮೀಜಿ, ಸಂನ್ಯಾಸಿಗೂ ಮಂಗನಿಗೂ ಇರುವ ವ್ಯತ್ಯಾಸವೇನು?'** (What is the difference between a monk and a monkey?) ಸೊಳ್ಳೆ ಕಚ್ಚಿದರೆ ಮಹಾಪ್ರಳಯ ಆಗಿಹೋಯಿತೆಂಬಂತೆ ಹೌಹಾರುವವರಲ್ಲ ವಿವೇಕಾನಂದರು; ಅಥವಾ ಮಹಾಪ್ರಳಯವೇ ಆಗಿಹೋದರೂ ಎಳ್ಳಷ್ಟೂ ವಿಚಲಿತರಾಗುವವರಲ್ಲ. ಈ ತುಂಟನ ಕೆಣಕುವ ಪ್ರಶ್ನೆಗೆ ಶಾಂತರಾಗಿ, ಗಂಭೀರವಾಗಿ, ಮೃದುವಾಗಿ ತಕ್ಷಣ ಉತ್ತರ ನೀಡಿಬಿಟ್ಟರು: **'ಈ ಟೇಬಲಿನ ಉದ್ದಗಲತೆಯಷ್ಟು!'**— (The width of this table!). ಪ್ರಶ್ನಿಸಿದ ವ್ಯಕ್ತಿ ಮಂಗನೇ ಆಗಿಹೋದ ಎಂದು ಬೇರೆ ಹೇಳಬೇಕಿಲ್ಲ.

## ವಿಕಾಸವಾದದ ಗುಟ್ಟು

**ಮೇಲಿನ ಘಟನೆ ಬಹಳ ಗುರುತ್ವಪೂರ್ಣವಾದುದು; ಏಕೆ ಎಂಬುದು ಮುಂದೆ ತಿಳಿಯುತ್ತದೆ. ಒಂದು ದೊಡ್ಡ ಪ್ರಶ್ನೆ ಮನುಷ್ಯನನ್ನು ಅನಾದಿಕಾಲದಿಂದ ಕಾಡುತ್ತಿದೆ: ನಾವು ಎಲ್ಲಿಂದ, ಹೇಗೆ ಬಂದೆವು? ಸುಮಾರು ೩,೦೦೦,೦೦೦,೦೦೦ ವರ್ಷಗಳ ಹಿಂದೆ ಈ ಭೂಮಿಯಲ್ಲಿ ಜೀವ ಉದ್ಭವಿಸಿತು ಎಂದು ವಿಜ್ಞಾನಿಗಳು ಹೇಳುತ್ತಾರೆ. ಜೀವ ಎಂದರೆ ಮನುಷ್ಯನಲ್ಲ— ಕಣ್ಣಿಗೆ ಕಾಣದ ಸಣ್ಣಜೀವಿ. ಕಾಲಕ್ರಮೇಣ ಕಣ್ಣಿಗಿಂದು ಕಾಣುವ ಸಹಸ್ರಾರು ಪ್ರಾಣಿಗಳು ಉಂಟಾದವು ಎನ್ನುತ್ತಾರೆ ವಿಜ್ಞಾನಿಗಳು.**

ಕಳೆದ ಶತಮಾನದಲ್ಲಿ ಅನೇಕ ದೊಡ್ಡ ದೊಡ್ಡ ಜೀವ ವಿಜ್ಞಾನಿಗಳು—ಜಾರ್ಜ್ ಬಫನ್, ಚಾರ್ಲ್ಸ್ ಲಿನ್ನೇಯಸ್, ಲಾಮಾರ್ಕ್ —ಬೆರಗುಗೊಳಿಸುವ ವಿಚಾರಗಳನ್ನು ಜಗತ್ತಿನ ಮುಂದಿಟ್ಟರು. ಒಂದು ಕಪ್ಪೆಯನ್ನು ನೋಡಿ: ಜನ್ಮದಿಂದ ಮೃತ್ಯುವಿನವರೆಗೆ ಅದರ ಶರೀರದಲ್ಲಿ ಆಗುವ ವ್ಯತ್ಯಾಸಗಳೆಷ್ಟು! ಇದರಿಂದಲೇ ವಿಜ್ಞಾನಿಗಳು ವಿಕಾಸವಾದ (evolution)ವನ್ನು ಜಗತ್ತಿನ ಮುಂದಿಡಲು ಸಾಧ್ಯವಾಯಿತು. ಆದರೆ ಮೇಲಿನ ವಿಜ್ಞಾನಿಗಳಾರೂ ವಿಕಾಸದ ಬಗ್ಗೆ ಸರಿಯಾಗಿ ತಿಳಿಸಲು ಅಸಮರ್ಥರಾಗಿದ್ದರು. ಚಾರ್ಲ್ಸ್ ಡಾರ್ವಿನ್ HMS ಬೀಗಲ್ ಎಂಬ ಹಡಗಿನಲ್ಲಿ ಜಗತ್ತೆಲ್ಲವನ್ನೂ ಸುತ್ತಿ, ಸಸ್ಯಾದಿಗಳನ್ನು ಸಂಗ್ರಹಿಸಿ ಕ್ರಮವಿಕಾಸದ ಸಿದ್ಧಾಂತದ ಸರಿಯಾದ ತಳಹದಿಯನ್ನು ೧೮೩೮ರಲ್ಲಿ ನಿರೂಪಿಸಿದ. ಆದರೆ ೨೦ ವರ್ಷಗಳ ಕಾಲ ಸುಮ್ಮನೆ ಕುಳಿತುಬಿಟ್ಟ. ೧೮೫೯ರಲ್ಲಿ *Origin of Species* ಬೆಳಕಿಗೆ ಬಂದಾಗ ಡಾರ್ವಿನ್ನನ ಸಿದ್ಧಾಂತ ಜಗತ್ತಿಗೆ ಸ್ಪಷ್ಟವಾಗಿ ಅರಿವಾಯಿತು.

ನಾವು ಇಲ್ಲಿ ಹೇಗೆ ಬಂದೆವು ಎಂಬುದನ್ನು ಡಾರ್ವಿನ್ ಸ್ಪಷ್ಟವಾಗಿ ತಿಳಿಸಿದ. **ಹೊಂದಾಣಿಕೆ** (Adaptation) ಮತ್ತು **ಸ್ವಾಭಾವಿಕ ಆಯ್ಕೆ** (Natural Selection) ಎಂಬ ಎರಡು ಚಕ್ರಗಳ ಮೇಲೆ ಡಾರ್ವಿನ್ನನ ವಿಕಾಸವಾದವೆಂಬ ಸೈಕಲ್ ನಡೆಯುವುದು. ಚಿಕ್ಕ ಚಿಕ್ಕ ಜೀವಿಗಳು ಹಲವಾರು ಮೊಟ್ಟೆಗಳನ್ನೋ ಬೀಜಗಳನ್ನೋ ನೀಡಿದರೂ ಅವುಗಳಲ್ಲಿ ಹೆಚ್ಚು ಬಲಯುತವಾದ ಮೊಟ್ಟೆಗಳೂ ಬೀಜಗಳೂ ಮುಂದೆ ಜೀವಿಗಳಾಗುತ್ತವೆ. ಈ ಬಲಯುತ ಸಂತತಿ ಮುಂದಿನ ಪ್ರಜನ್ಮಕ್ಕೆ ಕಾರಣವಾಗುತ್ತದೆ. ಪ್ರತಿ ಪ್ರಜನ್ಮದಲ್ಲೂ ಪಿತೃಗಳ ಅಥವಾ ಜನ್ಮದಾತರ **ಗುಣಾವಗುಣಗಳು** (characteristics) ಇರುತ್ತವೆ. ಇದು **ಸ್ವಾಭಾವಿಕ ಆಯ್ಕೆ**. ಜೀವಿಗಳು ಒಂದೇ ತೆರನಾಗಿ ಜೀವನ ನಡೆಸಲು ಸಾಧ್ಯವಿಲ್ಲ. ಹೊಟ್ಟೆಗಾಗಿ, ಜೀವನಕ್ಕಾಗಿ, ನಿರಂತರ ಹೊಡೆದಾಡಬೇಕು. ಪ್ರಕೃತಿಯೊಡನೆ ಜೀವನ್ಮರಣದ ಹೊಡೆದಾಟ ನಡೆದೂ ನಡೆದೂ ಪಾಠ ಕಲಿತೂ ಕಲಿತೂ ಜೀವಿಗಳಲ್ಲಿ ಹಲವಾರು ಪರಿವರ್ತನೆಗಳಾಗುತ್ತವೆ. ಈ ಪರಿವರ್ತನೆಯನ್ನು ಪರಂಪರಾಗತ ರೀತಿಯಲ್ಲಿ ಸಂತತಿಯೂ ಅಳವಡಿಸಿ ಕೊಂಡಿರುತ್ತದೆ. ಹೀಗೆ, ಕೆಲವು ಪ್ರಜನ್ಮಗಳ ನಂತರ ಒಂದೇ ವಂಶದಲ್ಲಿ ಅನೇಕ ಪರಿವರ್ತನೆಗಳನ್ನು ನೋಡಬಹುದು. ಈ ಪರಿವರ್ತನೆಯ

ಕ್ರಮಕ್ಕೂ, ಪರಿವರ್ತನೆಯ ಪರಿಣಾಮಕ್ಕೂ ಹೊಂದಾಣಿಕೆ ಎಂದು ಹೆಸರು. ಹೀಗೆ ಸ್ವಾಭಾವಿಕ ಆಯ್ಕೆ ಮತ್ತು ಹೊಂದಾಣಿಕೆಯಿಂದ ಕ್ರಮವಿಕಾಸವಾಗುತ್ತದೆ.

ಒಂದು ಅಮೀಬಾ ವರ್ಷಗಳ ಕ್ರಮವಿಕಾಸದಿಂದ ಮೀನಾಗಿದೆ. ಈ ವಿಕಾಸದ ಪ್ರಗತಿಪಥ ಏಕಮುಖಿ (linear) —ಸಣ್ಣ, ಸರಳ (simple) ಜೀವಿಗಳು ಪರಿವರ್ತನೆ ಹೊಂದಿ ಸಂಕ್ಲಿಷ್ಟ (complex) ಜೀವಿಗಳ ಉದ್ಭವವಾಗುತ್ತದೆ. ಇದೇ ವಿಕಾಸವಾದದ ಒಂದು ಅದ್ಭುತ, ಭವ್ಯ ನಿದರ್ಶನ, ಮಾನವ. ವಿಕಾಸವಾದದ ಉತ್ಕೃಷ್ಟ ಉದಾಹರಣೆ : ಬಾಲವಿದ್ದ ಪ್ರಾಣಿಗಳು ಕಾಲಕ್ರಮೇಣ ಬಾಲವನ್ನು ಹೋಗಲಾಡಿಸಿಕೊಂಡು ಕ್ರಮೇಣ ಎರೆಕ್ಟಸ್ (Homo erectus) ಆಗಿ, ಅದರಿಂದ ನಿಯಾಂಡ್ರಥಾಲ್ ಆಗಿ, ಅದರಿಂದ ಮನುಷ್ಯರ ಜನನವಾಗಿದೆ. ಇದೇ ಹೋಮಿನಿಜೇಶನ್(Hominization). ಅಂದರೇನು? ಮಂಗನಿಂದ ಮನುಷ್ಯನ ವಿಕಾಸವಾಗಿದೆ. ಇದೇ ಡಾರ್ವಿನ್ನನ ವಿಕಾಸವಾದ.



ಡಾರ್ವಿನ್‌ನ ವಿಕಾಸವಾದವನ್ನು ಕುರಿತು ಅವನ ಜೀವಿತಕಾಲದಲ್ಲಿಯೇ ಪ್ರಕಟವಾದ ಒಂದು ವ್ಯಂಗ್ಯ ಚಿತ್ರ

## ಮಹಾಪುರುಷರ ಸಿಟ್ಟು

ಏನು? ಮಂಗನಿಂದ ಮನುಷ್ಯನೇ? ಮಾನವ ಕೋತಿಯ ವಂಶಜನೇ? ಅಧ್ಯಾತ್ಮ ಜಗತ್ತಿನ ದಿಗ್ಗಜಗಳು ಈ ವಿಕಾಸವಾದವನ್ನು ಒಪ್ಪುವುದೇ ಇಲ್ಲ. ಇಲ್ಲಿ ದಿಗ್ಗಜಗಳೆಂದರೆ ಭಾರತೀಯ ದಿಗ್ಗಜಗಳು. ಮನುಷ್ಯ ದೈವಾಂಶಸಂಭೂತ. ಅವನು ದೇವರೇ ವಿನಾ ಮತ್ತೇನಲ್ಲ. ಇಂತಹ ದಿವ್ಯ ಮಾನವನನ್ನು ಕೋತಿಯಿಂದ ವಿಕಾಸ ಹೊಂದಿದ್ದಾನೆ ಎಂದರೆ ಅಪಮಾನ ಮಾಡಿದಂತೆ ಎನ್ನುತ್ತಾರೆ. ಈ ಭಿನ್ನಭಿಪ್ರಾಯಕ್ಕೆ ಕಾರಣವೇನು? ಡಾರ್ವಿನ್ ಕೇವಲ ಶರೀರವನ್ನೇ ನೋಡಿದ. ಆದರೆ ದಿವ್ಯಪುರುಷರು ಆತ್ಮನನ್ನು ನೋಡುತ್ತಾರೆ. ಇದೇ ಮುಖ್ಯ ವ್ಯತ್ಯಾಸ. ದೇಹದ ದೃಷ್ಟಿಯಿಂದ ಡಾರ್ವಿನ್ನನ ವಿಕಾಸವಾದ; ಆತ್ಮದ ದೃಷ್ಟಿಯಿಂದ ಮಾನವನು ದೈವಾಂಶ ಸಂಭೂತ ಎಂಬ ಸಿದ್ಧಾಂತ. ಈಗ ಡಾರ್ವಿನ್ನನ ಸಿದ್ಧಾಂತವನ್ನು ಮತ್ತೊಂದು ದೃಷ್ಟಿಯಿಂದ ನೋಡೋಣ.

## ಮನಸ್ಸಿನ ಎರಡು ಮಾತು

ವಿವೇಕಾನಂದರ ಜೀವನದ ಘಟನೆಯೊಂದಿಗೆ ಪ್ರಾರಂಭಿಸಿ ಡಾರ್ವಿನ್ನನ ಸಿದ್ಧಾಂತದ ಪರಿಚಯ ಮಾಡಿಕೊಂಡು ಅದರ ಬಗೆಗೆ ಇರುವ ಪ್ರತಿಕ್ರಿಯೆಯನ್ನು ನೋಡಿದೆವು. ಈಗ ಮನಸ್ಸಿನ ಬಗ್ಗೆ ಎರಡು ಮಾತು ಹೇಳಬೇಕು — ಅಥವಾ ಮನಸ್ಸಿನ ಎರಡು ಮಾತಿನ ಬಗ್ಗೆ ಹೇಳಬೇಕು. ಮನಸ್ಸೆಂಬ ಒಂದು ಅದ್ಭುತ ಯಂತ್ರ ಎಂತಹ ವಿಚಿತ್ರವಾದುದೆಂಬುದು ಎಲ್ಲರಿಗೂ ಗೊತ್ತು. ಅದರ ದ್ವಂದ್ವನೀತಿಯೂ ಗೊತ್ತು. ನಮ್ಮ ಮನಸ್ಸನ್ನು ಅಲ್ಲೋಲ ಕಲ್ಲೋಲವಾದ ಸಮುದ್ರಕ್ಕೆ ಹೋಲಿಸಿದರೆ ಸಮುದ್ರಕ್ಕೇ ಅಪಮಾನ ಮಾಡಿದಂತೆ. ಎಂತಹ ವಿಚಿತ್ರ ಈ ನಮ್ಮ ಮನಸ್ಸು! ಈ ಕ್ಷಣ ಇಲ್ಲಿ, ಮರುಕ್ಷಣ ಚಂದ್ರನ ಮೇಲೆ; ಈ ಕ್ಷಣ ಮೈಸೂರಿನಲ್ಲಿ, ಮರುಕ್ಷಣ ಮೆಸಪೊಟೋಮಿಯಾದಲ್ಲಿ; ಈ ಕ್ಷಣ ಸ್ವರ್ಗದಲ್ಲಿ, ಮರುಕ್ಷಣ ನರಕದಲ್ಲಿ! ಇದೇ ತಾನೇ ದೊಡ್ಡ ದಾರ್ಶನಿಕನ ಹಾಗೆ ಬ್ರಹ್ಮತತ್ತ್ವದ ಬಗ್ಗೆ ಮಾತಾಡುವ ನಮ್ಮ ಮನಸ್ಸು ಮರುಕ್ಷಣವೇ ನರಭಕ್ಷಕನನ್ನೂ ನಡುಗಿಸುವಂತಹ ಮಾತನಾಡುತ್ತದೆ. ಒಂದು ಕ್ಷಣ ತೃಪ್ತ, ಮತ್ತೊಂದು ಕ್ಷಣ ಬಕಾಸುರನ ಬಂಧು; ಒಂದು ಕ್ಷಣ ಶಾಂತ, ಮತ್ತೊಂದು ಕ್ಷಣ ಪರಮ ನಿರಾಶಾವಾದಿ; ಒಂದು ಕ್ಷಣ ಭಕ್ತ, ಮತ್ತೊಂದು ಕ್ಷಣ ನಾಸ್ತಿಕ—ಇದು ನಮ್ಮ ಮನಸ್ಸು. ಇದೇ ಮನಸ್ಸೇ ಕೋಟಿ ಕೋಟಿ ಜನರನ್ನು ಕೊಲ್ಲುವಂತಹ ಯಂತ್ರಗಳನ್ನು ತಯಾರಿಸುವುದು; ಇದೇ ಮನಸ್ಸೇ ಶಾಂತಿದೂತನಾಗುವುದು. ಅದಕ್ಕೆಂದೇ ನಮ್ಮ ಮನಸ್ಸನ್ನು ಒಂದು ಕೋತಿಗೆ ಹೋಲಿಸಲಾಗಿದೆ: ಈ ಕೋತಿಗೆ ಹೆಂಡ ಕುಡಿಸಿ, ಊಟ ಕೊಡದೆ, ಹಸಿವಿನಿಂದ ನರಳುವ ಸ್ಥಿತಿಯಲ್ಲಿ ಒಂದು ಪಂಜರದಲ್ಲಿ ಇಡಲಾಗಿದೆ. ಕೋತಿಯ ಮೈಮೇಲೆ ಸಿಹಿನೀರು ಎರಚಿರುವುದರಿಂದ ಅದರ ಮೈತುಂಬ ಕೆಂಪಿರುವೆ ಲಗ್ಗೆಹಾಕಿದೆ. ಪಂಜರದ ಎದುರಿಗೆ ನಾನಾ ತರಹದ ಬಾಳೆಯಹಣ್ಣುಗಳು—ಜೇನುತುಪ್ಪದಲ್ಲಿ ಅದ್ದಿ ತೆಗೆದವು ಕಾಣುತ್ತಿವೆ. ಇದೇ ನಮ್ಮ ಮನಸ್ಸಿನ ಸ್ಥಿತಿ: ವಿಜ್ಞಾನಿಯಿರಲಿ, ಮಂತ್ರಿಯಿರಲಿ, ಪಂಡಿತನಿರಲಿ—ತರಬೇತಿಯಿರದ ಎಲ್ಲರ ಮನಸ್ಸೂ ಇದೇ ರೀತಿಯದು.

## ಮನವಾಗಲಿ ನಮ್ಮ ಕೃಷ್ಣ

ಮನವೆಂಬ ಮರ್ಕಟನ ಪರಿಚಯ ನಮಗಾಯಿತು. ಈ ಮರ್ಕಟನನ್ನು ಹಾಗೆಯೇ ಬಿಟ್ಟರೆ ಲಾಭವೇನು? ಮಾತೆ ಕಾವೇರಿ ಕಲರವ ಮಾಡುತ್ತಾ ಬಹು ವರ್ಷ ಹರಿಯುತ್ತಿದ್ದಳು. ಅಣೆಕಟ್ಟು ಕಟ್ಟಿದರೆ ತಾಯಕೃಪೆ ಪಡೆಯಬಹುದು ಎಂದು ವಿಶ್ವೇಶ್ವರಯ್ಯನವರು ಚಿಂತಿಸಿದುದರ ಫಲವೇ ಕರ್ನಾಟಕದ ಸಮೃದ್ಧಿಗೊಂದು ಕಾರಣ. ಮನಸ್ಸು ಒಂದು ಅದ್ಭುತ ಸಂಪತ್ತು. ಕೋತಿಯಂತೆ ಆಡಲು ಬಿಟ್ಟರೆ ವರ ಶಾಪವಾಗಿ ಪರಿಣಮಿಸುತ್ತದೆ. ಇದೇ ಮನಸ್ಸನ್ನು ನಿಯಂತ್ರಣಕ್ಕೆ ತಂದರೆ ಕೋತಿಯೇ ದೇವರಾಗಬಹುದು. ಈ ಮನೋನಿಯಂತ್ರಣವೇ ಧರ್ಮ. ಆಧ್ಯಾತ್ಮಿಕತೆ ಎಂದರೇನು? ಮನಸ್ಸು ಸರಿಯಾಗುವುದು. ಈ ಮನಸ್ಸನ್ನು ಸರಿಮಾಡುವುದು ಹೇಗೆ? ಅದನ್ನೇ ಭಾರತದ ಅಧ್ಯಾತ್ಮವಿದ್ಯೆ ಹೇಳಿಕೊಡುವುದು. ಪ್ರಾರ್ಥನೆ, ಜಪ, ಮನನ, ನಿದಿಧ್ಯಾಸನ, ಇತ್ಯಾದಿ ಹಲವು

ಪಥಗಳಿವೆ. ನಿಃಸ್ವಾರ್ಥ ಸೇವೆ ಮತ್ತೊಂದು ರಾಜಮಾರ್ಗ. ಪರರನ್ನು ತನ್ನಂತೆ ಬಗೆದೊಡೆ ಮನಸ್ಸು ಶೀಘ್ರವಾಗಿ ಶುದ್ಧವೂ ಶಾಂತವೂ ಆಗುತ್ತದೆ. ಒಬ್ಬ ಶ್ರೇಷ್ಠ ವಿಜ್ಞಾನಿಯೋ, ಕಲಾವಿದನೋ ತನ್ನ ಮನಸ್ಸಿನ ಶೇಕಡ ೫ ಭಾಗ ಮಾತ್ರ ವ್ಯವಹರಿಸಿರುತ್ತಾನೆ ಜೀವಿತಕಾಲದಲ್ಲಿ; ಉಳಿದ ಶೇಕಡ ೯೫ರಷ್ಟು ವ್ಯರ್ಥವಾಗುತ್ತದೆ. ಈ ಮನಸ್ಸಿಗೆ ಸರಿಯಾಗಿ ತರಬೇತಿ ನೀಡಿ, ತಿದ್ದಿ, ನಿಯಂತ್ರಿಸಿದರೆ ಆಗುವ ಉಪಕಾರಗಳನ್ನು ಕಲ್ಪಿಸುವುದೂ ಅಸಾಧ್ಯ. ನಿಯಂತ್ರಿಸಿದ ಮನಸ್ಸು ಮನುಷ್ಯನ ಮನಸ್ಸಾಗುತ್ತದೆ. ಕೋತಿಯಂತೆ ಚಂಚಲವಾದ ಮನಸ್ಸು ಸ್ಥಿರವಾದರೆ ಆಗ ಮನುಷ್ಯನ ಮನಸ್ಸು ಎನಿಸಿ ಕೊಳ್ಳಲು ಯೋಗ್ಯವಾಗುತ್ತದೆ. ಈ ಪರಿವರ್ತನೆ ಸಹಜ ಸಾಧ್ಯ—ಎಲ್ಲರೂ ಸಾಧಿಸಬಹುದು. ಆದರೆ ಪ್ರಗತಿಯ ಹಾದಿಗೆ ಕೊನೆ ಎಂಬುದಿಲ್ಲ. ಮಂಗನಂತೆ ಚಂಚಲವಾದ ಮನಸ್ಸು ಹಿಡಿತಕ್ಕೆ ಬಂದು ಮನುಷ್ಯನ ನೈಜ ಮನಸ್ಸಾಯಿತು. ಮುಂದೇನು? ಮುಂದಿನದು ದಿವ್ಯ ಮನಸ್ಸಿನ ಸ್ಥಿತಿ—ದೇವರಂತಹ ಮನಸ್ಸು. ಅದನ್ನೂ ನಾವೆಲ್ಲರೂ ಧ್ಯಾನಾದಿಗಳಿಂದ ಸಾಧಿಸಬಹುದು. ಅದೇ ಆಧ್ಯಾತ್ಮಿಕತೆ. ಅದೇ ವಿಕಾಸ.




ಮಾನವ ವಿಕಾಸದ ಶಿಖರದ ಪರಮೋತ್ತಮ ಹಂತ ತಲುಪಿದ್ದ ಮಹಾಪುರುಷ

## ವಿಕಾಸದ ಒಳಗುಟ್ಟು

ನಾವು ವಿವೇಕಾನಂದರ ಕುರಿತ ಘಟನೆಯೊಂದಿಗೆ ಪ್ರಾರಂಭಿಸಿ ಡಾರ್ವಿನ್ನನ ಸಿದ್ಧಾಂತ ಹೇಳಿ, ನಂತರ ಮನಸ್ಸಿನ ಸಾಧಾರಣ ಸ್ಥಿತಿ ಹೇಳಿ, ಕಡೆಗೆ ಮನಸ್ಸಿನ ನಿಯಂತ್ರಣದ ಬಗ್ಗೆ ಹೇಳಿದೆವು. ಏನು ಇದರ ಒಳಗುಟ್ಟು? ಒಂದೇ ಒಂದು ಜೀವಾಣು(cell) ಭಾಗವಾಗಿ ಭಾಗವಾಗಿ ವಿಕಾಸಹೊಂದಿ ಹೊಂದಿ ಮನುಷ್ಯ, ಆನೆ, ಇತ್ಯಾದಿ ಸಹಸ್ರಾರು ಪ್ರಾಣಿಗಳ ರೂಪತಾಳಿದೆ ಎಂದು ವಿಕಾಸವಾದ ಹೇಳುವಂತೆ, ಮನಸ್ಸೂ ಕೂಡ ಸಹಸ್ರಾರು ಚಿಂತೆಗಳನ್ನು ಕಡಮೆ ಮಾಡುತ್ತಾ ಮಾಡುತ್ತಾ ವಿಕಾಸ ಹೊಂದುತ್ತಾ ಹೊಂದುತ್ತಾ ಒಂದೇ ಒಂದು ಚಿಂತನೆಯ ಸ್ಥಿತಿಗೆ ಬಂದರೆ ಅದೇ ಸಮಾಧಿ—ಅದೇ ದೇವರ ಮನಸ್ಸು. ಇದನ್ನು ವಿಕಾಸ (evolution) ಎಂದೂ ಕರೆಯಬಹುದು, ಸಂಕೋಚ (involution) ಎಂದೂ ಕರೆಯಬಹುದು. ಇದೇ ಜೀವನದ ಉದ್ದೇಶ. ಚಂಚಲತೆಯಿಂದ ಏಕಾಗ್ರತೆ—ಇದೇ ನೈಜ ವಿಕಾಸ. ಇದನ್ನೇ ಶ್ರೀರಾಮಕೃಷ್ಣರು ಜೀವನದ ಉದ್ದೇಶ ಎಂದರು. ಇಂತಹ ಪರಮೋನ್ನತ ಸ್ಥಿತಿಯನ್ನು ತಲುಪಿದ ಮಹಾಪುರುಷರು ಮತ್ತೆಂದಿಗೂ ಮನುಷ್ಯರೆನ್ನಿಸಿಕೊಳ್ಳುವುದಿಲ್ಲ. ಅವರು ದೇವರೇ ಆಗಿಬಿಡುತ್ತಾರೆ. ಇಂತಹ ಕೆಲವೊಂದು ಜೀವಗಳೇ ಪೃಥ್ವೀ ಮಾತೆಯ ವರಪುತ್ರರು. ಇಂತಹವರಲ್ಲಿ ಅಗ್ರಗಣ್ಯರು ವಿವೇಕಾನಂದರು. ಇಚ್ಛೆ ಬಂದಾಗ ನಿರ್ವಿಕಲ್ಪ ಸಮಾಧಿಯ ಶಿಖರವನ್ನು ಏರುವ ಸಾಮರ್ಥ್ಯ ಹೊಂದಿದ್ದ ಮಹಾಪುರುಷರಿವರು.

ಈಗ ನಾವು ಪ್ರಾರಂಭಿಸಿದ ಘಟನೆಗೆ ಮತ್ತೊಮ್ಮೆ ಬರೋಣ. ಆ ಊಟದ ಟೇಬಲ್ ಒಂದು ಮಹದದ್ಭುತ ಘಟನೆಯ ಸಾಕ್ಷಿಯಾಗಿತ್ತು. ಏನದು? ಒಂದು ಕಡೆ ಮಾನವನ ವಿಕಾಸದ ಹಂತದ ಅತ್ಯಂತ ಕೆಳಗಿನ ಸ್ತರದಲ್ಲಿದ್ದ ವ್ಯಕ್ತಿ—ಮಂಗದ ಮನಸ್ಸಿನ ವ್ಯಕ್ತಿ—ಕುಳಿತಿದ್ದ. ಮತ್ತೊಂದು ಕಡೆ ವಿಕಾಸದ ಸರ್ವಶ್ರೇಷ್ಠ ಸ್ಥಿತಿಯನ್ನೇರಿದ್ದ, ಮಾನವ ವಿಕಾಸದ ಶಿಖರದ ಪರಮೋತ್ತಮ ಹಂತ ತಲುಪಿದ್ದ ಮಹಾಪುರುಷರು ಕುಳಿತಿದ್ದರು. ಇಬ್ಬರೂ ಒಂದೇ ಟೇಬಲಿನಲ್ಲಿ ಕುಳಿತು ಆಹಾರ ಸೇವಿಸುತ್ತಿದ್ದರು. ಅವರ ನಡುವಿನ ಅಂತರ? ಆ ಟೇಬಲಿನ ಉದ್ದಳತೆಯಷ್ಟು—ಅಲ್ಲ ಅಪಾರವಾದುದು!




**ವಿಕಾಸವು** ಜೀವಕ್ಷೇತ್ರದಲ್ಲಿ ಮಂದಗತಿಯಲ್ಲಿ ನಡೆಯುತ್ತಿದೆ. ವಿಕಾಸದ ಕೊನೆಯ ಹಂತಕ್ಕೆ ಮಾನವ ಇನ್ನೂ ಏರಿಲ್ಲ. ಪ್ರಾಣಿಗಳಲ್ಲಿರುವ ಮನೋವ್ಯಾಪಾರಕ್ಕಿಂತ ಮಾನವರಲ್ಲಿರುವ ಮನೋವಿಕಾಸ ಹೆಚ್ಚಿನದು. ಮುಂದೆ ಮಾನವ-ಮನಸ್ಸು ಮತ್ತಷ್ಟು ವಿಕಾಸವಾಗಲಿದೆ. ವಿಕಾಸ ವಿಶ್ವದ ನಿಯತಿ.

ಅನ್ನಮಯ, ಪ್ರಾಣಮಯ ಮತ್ತು ಮನೋಮಯ ಜೀವನ ಪರಿಶುದ್ಧವಾದರೆ, ವಿಜ್ಞಾನಮಯ ಜೀವನಕ್ಕೆ ಏರುವುದು ಸಾಧ್ಯ. ಈ ಆರೋಹಣ ಬಹು ಕಷ್ಟ. ಏಕೆಂದರೆ ವಿಕಾಸದ ಹಂತಗಳು ಅನೇಕ. ಪ್ರಾಣಮಯ ಮತ್ತು ಮನೋಮಯದ ಹಲವಾರು ಅಂತಸ್ತರಗಳನ್ನು ತಪಸ್ಸಿನಿಂದ ದಾಟಿ ಹೋಗಬೇಕು. ಅಭೀಪ್ಸೆ, ಏಕಾಗ್ರತೆ, ತಾಳ್ಮೆ, ಪರಿಶುದ್ಧತೆ—ಇವೆಲ್ಲ ತಪಸ್ಯೆಯಲ್ಲಿ ಸೇರಿವೆ.

ತಪಸ್ಯೆಯಿಂದ ಮುಂದೆ ಸಾಗಿದಾಗ, ಸಚ್ಚಿದಾನಂದದ ಸ್ಪರ್ಶವಾಗುತ್ತದೆ. ವಿಜ್ಞಾನಮಯಕೋಶವನ್ನು ಪ್ರವೇಶಿಸಿದೊಡನೆ ಸಾಧಕನಿಗೆ ಆಗುವ ಮೊದಲ ಅನುಭವವೇ ಅದು. ಅನಂತರ ಆನಂದಾನುಭೂತಿ. ಅದೇ ಜೀವನದ ಪರಮ ಸಿದ್ಧಿ, ಪೂರ್ಣತೆ!

—ಶ್ರೀ ಅರವಿಂದರು